**ಅಸಲು ದಾವ ಸಂಖ್ಯೆಃ 463/2018**
**ಡಿ.ಡಬ್ಲೂ -1**

ದಿಃ 24.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಶ್ರೀ ಎಸ್ ಜಿ ಕೆ ರವರಿಂದಃ-**

1. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ನಾನು ನನ್ನ ವಕೀಲರ ಮುಖಾಂತರ ಓದಿ ತಿಳಿದುಕೊಂಡಿರುತ್ತೇನೆ. ನಿಶಾನೆ ಡಿ 16 ನ್ನು ಯಾವ ವರ್ಷ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನಿಶಾನೆ ಡಿ 16 ರಲ್ಲಿ ದಿನಾಂಕ 20.04.2018 ರಂದು ತಯಾರಿಸಿದ ದಿನಾಂಕ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 20.04.2018 ರ ಕ್ಕಿಂತ ಮೊದಲು ಇರುವ ಕಂಪ್ಯೂಟರ ಉತಾರ ನನ್ನ ಬಳಿ ಇರುವುದಿಲ್ಲ. ನಾನು ದಿನಾಂಕ 01.09.2018 ಕ್ಕಿಂತ ಮೊದಲು ಗ್ರಾಮಪಂಚಾಯತಿಯಲ್ಲಿ ಖರೀದಿ ಪತ್ರದ ಪ್ರತಿಯನ್ನು ನೀಡಿದ್ದೇನು, ದಿನಾಂಕ 01.09.2018 ರಂದು ಸದರಿ ಖರೀದಿ ಪತ್ರ ನೀಡಿಲ್ಲ. ದಿನಾಂಕ 01.09.2018 ರಂದು ಆದ ಯಾವುದೇ ಖರೀದಿ ಪತ್ರ ಇರುವುದಿಲ್ಲ ಆದರೆ ಖರೀದಿ ಕರಾರು ಪತ್ರ ಇರುತ್ತದೆ. ನಾನು ಕಂಪ್ಯೂಟರನಲ್ಲಿ ತಯಾರಿಸಿದ ಉತಾರನ್ನು ನನಗೆ ಪೂರೈಸಬೇಕು ಎಂದು ಯಾವಾಗ ಅರ್ಜಿ ಸಲ್ಲಿಸಿದ್ದೇನು ಎಂದು ನನಗೆ ನೆನಪಿಲ್ಲ. ನಾನು ಗ್ರಾಮಪಂಚಾಯತಿಯಿಂದ ನಿಶಾನೆ ಡಿ 16 ನ್ನು ಪಡೆದುಕೊಳ್ಳುವಾಗ ತಹಶೀಲ್ದಾರ ಕಚೇರಿಯಿಂದ ನೀಡಿರುವ ಪಹಣಿ ಪತ್ರಿಕೆಯ ಪ್ರತಿಯನ್ನು ನೀಡಿಲ್ಲ. ನಾನು ನಿಶಾನೆ ಡಿ 16 ನ್ನು ಪಡೆದುಕೊಳ್ಳುವಾಗ ಗ್ರಾಮಪಂಚಾಯತಿ ನಿರ್ಣಯ ದಿನಾಂಕ 13.02.56 ದಾಖಲೆಯನ್ನು ನೀಡಿರುವುದಿಲ್ಲ.

2. ನಾನು ಸರ್ವೆ ನಂಬರ 22/2 ರ ಖರೀದಿ ಪತ್ರವನ್ನು ನೀಡಿದ್ದೇನೆ ಎಂದು ನನಗೆ ನಿಶಾನೆ ಡಿ 16 ನ್ನು ನೀಡಲಾಗಿರುತ್ತದೆ ಎಂದರೆ ನಾನು ಖರೀದಿ ಕರಾರು ಪತ್ರವನ್ನು ನೀಡಿರುತ್ತೇನೆ.

ನಿಶಾನೆ ಡಿ 16 ರಲ್ಲಿ ಸ್ವತ್ತಿನ ಸ್ವಾ ಧೀನ ರೀತಿ ಎಂಬ ಕಾಲಂನಲ್ಲಿ ಸೇಲ್ ಡಿಡ ಎಂದು ಬರೆದಿದೆ ಎಂದರೆ ಸರಿ. ನಾನು ಗ್ರಾಮಪಂಚಾಯತಿಗೆ ಸರ್ವೇ ನಂಬರ 22/2 ಆಸ್ತಿಯ ಖರೀದಿ ಪತ್ರವನ್ನು ನೀಡಿಲ್ಲ. ಮಾಣೀಕ ಭರಮಾ ಕಲ್ಪತ್ರಿ ರವರು ನನ್ನ ತಮ್ಮನಾಗಿರುತ್ತೇನೆ. ಮಾಣೀಕ ಭರಮಾ ಕಲ್ಪತ್ರಿ ರವರಿಗೆ ಸರ್ವೇ ನಂಬರ 22/3/4 ರ ಕುರಿತಾಗಿ ಯಾವುದೇ ಖರೀದಿ ಪತ್ರ ಆಗಿಲ್ಲ ಎಂದರೆ ಅದು ಅವರಿಗೆ ಗೊತ್ತಿರುತ್ತದೆ. ನಿಶಾನೆ ಡಿ 43 ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ನಿಶಾನೆ ಡಿ 43 ರಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿಲ್ಲ. ನಿಶಾನೆ ಡಿ 43 ರಲ್ಲಿ ಸರ್ವೇ ನಂಬರ 22/3 ಎಂದು ಬರೆಯಲಾಗಿದೆ ಎಂದರೆ ಸರಿ. ನಿಶಾನೆ ಡಿ 18 ರಲ್ಲಿ ಸರ್ವೇ ನಂಬರ 22/3/4 ಎಂದು ಬರೆಯಲಾಗಿದೆ ಎಂದರೆ ಬರೆದಿರಬಹುದು. ಸದರಿ ಮಾಣೀಕ ಭರಮಾ ಕಲ್ಪತ್ರಿ ರವರು ಸಹ ಖರೀದಿ ಕರಾರು ಪತ್ರವನ್ನು ಹೊಂದಿರುತ್ತಾರೆ. ನಿಶಾನೆ ಡಿ 18 ರಲ್ಲಿ ಸ್ವತ್ತಿನ ಸ್ವಾ ಧೀನದ ರೀತಿ ಸೇಲ್ ಡಿಡ ಎಂದು ಬರೆಯಲಾಗಿದೆ ಎಂದರೆ ಸರಿ. ಈ ರೀತಿ ಸೇಲ್ ಡಿಡ ಎಂದು ತಪ್ಪಾಗಿ ಬರೆಯಲಾಗಿರುತ್ತದೆ. ತಹಶೀಲ್ದಾರ ಕಚೇರಿಯಲ್ಲಿ ನೀಡಿರುವ ಸರ್ವೇ ನಂಬರ 22/3 ರ ಪಹಣಿ ಪತ್ರಿಕೆಯನ್ನು ನಾನು ನೋಡಿಲ್ಲ. ನನ್ನ ಮನೆಯ ಪೂರ್ವ ದಿಕ್ಕಿನಲ್ಲಿ ಮಾಣೀಕ ಭರಮಾ ಕಲ್ಪತ್ರಿ ರವರ ಮನೆ ಇರುತ್ತದೆ. ನನ್ನ ಮನೆಯ ಪೂರ್ವ ದಿಕ್ಕಿಗೆ ಮಹಾದೇವ ಲಕ್ಷ್ಮಣ ಪಾಟೀಲ ಎನ್ನುವವರ ಮನೆ ಯಾ ಆಸ್ತಿ ಇರುವುದಿಲ್ಲ. ಕಲ್ಲಪ್ಪ ಮಹಾದೇವ ಪಾಟೀಲ ಎಂದರೆ ವಾದಿಯವರ ಅಜ್ಜ ಆಗಿರುತ್ತಾರೆ. ನನ್ನ ಆಸ್ತಿಯ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ. ನನ್ನ ಆಸ್ತಿಯ ಪಶ್ಚಿಮ ದಿಕ್ಕಿಗೆ ಮಹಾದೇವ ಪಾಟೀಲ ರವರ ಮನೆ ಇರುತ್ತದೆ. ನನ್ನ ಆಸ್ತಿಯ ಉತ್ತರಕ್ಕೆ ಸಹದೇವ ಪಾಟೀಲ ರವರ ಮನೆ ಇರುತ್ತದೆ.

3. ನಿಶಾನೆ ಡಿ 18 ರ ಚೆಕಬಂಧಿಯ ಯಾವುದೇ ದಿಕ್ಕಿನಲ್ಲಿ ನನ್ನ ಆಸ್ತಿ ಯಾ ಮನೆಯನ್ನು

ತೋರಿಸಿಲ್ಲ ಎಂದರೆ ಮಾಣೀಕ ರವರು ಮನೆಯನ್ನು ಕಟ್ಟಿಲ್ಲ ಅವರ ಜಾಗ ಮಾತ್ರ ಇರುತ್ತದೆ. ಸರ್ವೇ ನಂಬರ 22/3/4 ರಲ್ಲಿ ಮಾಣೀಕ ರವರ ಯಾವುದೇ ಜಾಗ ಇಲ್ಲ ಎಂದರೆ ಸರಿಯಲ್ಲ. ME No. 2379 ರ ಪ್ರಕಾರ ಕಲ್ಲಪ್ಪ ಮಹಾದೇವ ಪಾಟೀಲ ರವರ ಹೆಸರನ್ನು ದಾವಾ ಆಸ್ತಿಯ ಉತಾರನಲ್ಲಿ ದಾಖಲಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿ ಪಹಣಿ ಪತ್ರಿಕೆಯಲ್ಲಿ ಕಲ್ಲಪ್ಪ ಮಹಾದೇವ ಪಾಟೀಲ ರವರ ಹೆಸರು ಕಡಿಮೆಯಾಗಿ ವಾದಿಯರ ಹೆಸರು ದಾಖಲಾಗಿದೆ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ಅದು ಬೋಗಸ್ ಆಗಿ ದಾಖಲಾಗಿರುತ್ತದೆ. ಸದರಿ ಬೋಗಸ್ ಎಂಟ್ರಿ ಕುರಿತು ನಾನು ಯಾವುದೇ ತಕರಾರು ಯಾ ಅಪೀಲ್ ಮಾಡಿರುವುದಿಲ್ಲ. ನಾನು ಗ್ರಾಮಪಂಚಾಯತಿಯಲ್ಲಿಯೂ ಸಹ ಬೋಗಸ್ ಎಂಟ್ರಿ ಎಂದು ತಕರಾರು ಮಾಡಿರುವುದಿಲ್ಲ. ನನ್ನ ಹೆಸರು ಗ್ರಾಮಪಂಚಾಯತಿ ಉತಾರನಲ್ಲಿ ದಾಖಲಾದ ಕುರಿತಾಗಿ ವಾದಿಯರು 2018 ನೇ ಇಸ್ವಿಯಲ್ಲಿ ಅರ್ಜಿಯನ್ನು ನೀಡಿದ್ದರು. ಆಗ ಗ್ರಾಮಪಂಚಾಯತಿಯವರು ನನ್ನನ್ನು ಕರೆಸಿದ್ದರು. ನಾನು ಆಗ ಗ್ರಾಮಪಂಚಾಯತಿಗೆ ಕಾಗದ ಪತ್ರಗಳನ್ನು ಸಲ್ಲಿಸಿದ್ದೇನು. ಖರೀದಿ ಕರಾರು ಪತ್ರದ ಅನ್ವಯ ನನ್ನ ಹೆಸರನ್ನು ದಾಖಲಿಸಲು ಬರುವುದಿಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಿಶಾನೆ ಪಿ 12 ನ್ನು ನಾನು ನನ್ನ ವಕೀಲರ ಮುಖಾಂತರ ಓದಿ ತಿಳಿದುಕೊಂಡಿರುತ್ತೇನೆ. ನಿಶಾನೆ ಪಿ 12 ರಲ್ಲಿ ನೀಡಿದ ಹಿಂಬರಕ್ಕೆ ನಾನು ತಕರಾರು ಸಲ್ಲಿಸಿಲ್ಲ. ಸದರಿ ಸಮಯದಲ್ಲಿ ನಾನು ಗ್ರಾಮಪಂಚಾಯತಿಗೆ ಒಂದು ಅಫಿಡೇವಿಟ್ ನ್ನು ನೀಡಿರುತ್ತೇನೆ ಎಂದರೆ ಸರಿ. 1981 ನೇ ಇಸ್ವಿಯಲ್ಲಿ ನಾನು ಖರೀದಿ ಮಾಡಿದ್ದೇನೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಗ್ರಾಮಪಂಚಾಯತಿಯಲ್ಲಿ ಅಥವಾ ಈ ನ್ಯಾಯಾಲಯದಲ್ಲಿ ಖರೀದಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ.

4. ದಾವಾ ಆಸ್ತಿಯ ಕುರಿತಾಗಿ ಎನ್ ಎ ಆದೇಶವಾಗಿರುವುದಿಲ್ಲ. ಸರ್ವೇ ನಂಬರ 22/2 ಇದು ಗ್ರಾಮಪಂಚಾಯತಿ ವತಿಯಿಂದ ಲೇಔಟ್ ಆಗಿಲ್ಲ. 1982ನೇ ಇಸ್ವಿಯಲ್ಲಿ ಗ್ರಾಮಪಂಚಾಯತಿಯಲ್ಲಿ ಒಂದು ಠರಾವ ಪಾಸಾಗಿದ್ದು ಅದನ್ನು ಯಾವ ಸರ್ವೇ ನಂಬರನಲ್ಲಿ ಯಾರು ಮನೆ ಕಟ್ಟಿದ್ದಾರೆ ಎಂದು ಬರೆದಿಲ್ಲ ಎಂದರೆ ನನಗೆ ಮರಾಠಿ ಬರುವುದಿಲ್ಲ. ನಿಶಾನೆ ಡಿ 14 ರಲ್ಲಿ ಬರೆದಿರುವ ವಿಷಯದ ಕುರಿತಾಗಿ ನಮ್ಮ ವಕೀಲರಿಂದ ಮಾಹಿತಿ ಪಡೆದುಕೊಂಡಿರುತ್ತೇನೆ. ನಿಶಾನೆ ಡಿ 14 ರಲ್ಲಿ ಯಾರು ಯಾವ ಸರ್ವೇ ನಂಬರನಲ್ಲಿ ಮನೆಯನ್ನು ಕಟ್ಟಿದ್ದಾರೆ ಎಂದು ಬರೆದಿಲ್ಲ ಎಂದರೆ ಸರಿ. 1986 ನೇ ಇಸ್ವಿಯಲ್ಲಿ ಆದ ಗ್ರಾಮಪಂಚಾಯತಿ ಮೀಟಿಂಗ್ ನಲ್ಲಿ ನಾನು ಖರೀದಿ ಪತ್ರವನ್ನು ನಾನು ನೀಡಿಲ್ಲ ಆದರೆ ಅದಕ್ಕಿಂತ ಮೊದಲು ನೀಡಿರುತ್ತೇನೆ. ನಾನು ಆ ರೀತಿ 1982 ನೇ ಇಸ್ವಿಯಲ್ಲಿ ದಾಖಲೆಗಳನ್ನು ನೀಡಿರುತ್ತೇನೆ. ನಿಶಾನೆ ಡಿ 15 ನ್ನು ನಾನು ನನ್ನ ವಕೀಲರ ಮುಖಾಂತರ ಓದಿಸಿಕೊಂಡಿರುತ್ತೇನೆ. ನಿಶಾನೆ ಡಿ 15 ರಲ್ಲಿ ನನ್ನ ಹೆಸರನ್ನು ಬರೆದಿಲ್ಲ ಎಂದರೆ ಸರಿ ಆದರೆ ಕಲ್ಪತ್ರಿ ಎಂದು ಬರೆದಿದೆ. ಮಾರುತಯ್ಯಾ ನನಗೆ ಸಂಬಂಧಿಕನಲ್ಲ. ನಿಶಾನೆ ಡಿ 15 ರಲ್ಲಿ ಕಲ್ಪತ್ರಿ ರವರ ಹೆಸರಿನ ಮುಂದೆ ಸರ್ವೇ ನಂಬರ 23 ಎಂದು ಬರೆಯಲಾಗಿದೆ ಎಂದರೆ ಅದು ತಪ್ಪಾಗಿ ಬರೆದಿರುತ್ತಾರೆ. ನಾನು ಈ ರೀತಿ ಕಲ್ಪತ್ರಿ ರವರ ಹೆಸರ ಮುಂದೆ ತಪ್ಪಾಗಿ ಬರೆದಿದ್ದಾರೆ ಎಂದು ತಕರಾರು ನೀಡಿರುವುದಿಲ್ಲ. ನಿಶಾನೆ ಡಿ 15 ರಲ್ಲಿ ಸರ್ವೇ ನಂಬರ 23 ನ್ನು ತಿದ್ದಿ 22/2 ಎಂದು ಬರೆದಿದ್ದಾರೆ ಎಂದರೆ ಗ್ರಾಮಪಂಚಾಯತಿಯವರು ಬರೆದಿರುತ್ತಾರೆ. ನಿಶಾನೆ ಡಿ 35 ರಲ್ಲಿ ಠರಾವ ಆಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಮನೆ ನಂಬರ 1/ಎ ಸರ್ವೇ ನಂಬರ 22/2 ರಲ್ಲಿ ಕಟ್ಟಿದ್ದಾರೆ ಎಂದು ತೋರಿಸಲು ನನ್ನ ಬಳಿ ಹಾಜರುಪಡಿಸಿದ ದಾಖಲೆಯನ್ನು ಬಿಟ್ಟು ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಿಶಾನೆ ಡಿ 35 ರಲ್ಲಿ ಸರ್ವೇ ನಂಬರ 22/2 ಎಂದು ಬರೆದಿಲ್ಲ ಎಂದರೆ ಸರಿ. ಸದರಿ ನಿಶಾನೆ ಡಿ 35 ರಲ್ಲಿ ಎಷ್ಟು ವಿಸ್ತೀರ್ಣದಲ್ಲಿ

ಮನೆಯನ್ನು ಕಟ್ಟಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ನಿಶಾನೆ ಡಿ 52 ರಿಂದ 63 ರ ವರೆಗಿನ ದಾಖಲೆಗಳಲ್ಲಿ ಸರ್ವೇ ನಂಬರ 22/2 ಎಂದು ಬರೆದಿಲ್ಲ ಎಂದರೆ ಸರ್ವೇ ನಂಬರನ್ನು ಈ ರೀತಿ ದಾಖಲೆಯಲ್ಲಿ ಬರೆಯುವುದಿಲ್ಲ. ನಿಶಾನೆ ಡಿ 52 ರಲ್ಲಿ ಮನೆ ಪಟ್ಟಿ ಬಾಕಿ 150+ಹಾಲಿ 50 ಎಂದು ಬರೆಯಲಾಗಿದೆ. ನಿಶಾನೆ ಡಿ 53 ರನ್ವಯ 500 ರೂಪಯಿ ಮನೆ ಕರ ತುಂಬಿರುತ್ತೇನೆ ಎಂದರೆ ವರ್ಷಕ್ಕೆ ಮನೆ ಕರ ರೂ 150 ಬರುತ್ತಿತ್ತು ಹಾಗೂ ನಾನು ವಿದ್ಯುತಚ್ಛಕ್ತಿ ತುಂಬಿರಲಿಲ್ಲ. ನನ್ನ ಹೆಸರಿನಲ್ಲಿ ಮನೆ ನಂಬರ 1/1/ಎ 1/ಬಿ ಈ ರೀತಿ ನಂಬರ ಹೊಂದಿದ ಮನೆ ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆ ಸರ್ವೇ ನಂಬರ 22/2 ರಲ್ಲಿ ಇರುತ್ತದೆ. ಸದರಿ ಮನೆಯ ಗ್ರಾಮಪಂಚಾಯತಿಯ ಠರಾವ ಹಾಗೂ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸುತ್ತೇನೆ. ನಿಶಾನೆ ಡಿ 64,66,67,68 ಮತ್ತು 69 ರಲ್ಲಿ ಆಸ್ತಿಯ ಸರ್ವೇ ನಂಬರ 22/2 ಹಾಗೂ ಮನೆಯ ವಿಸ್ತೀರ್ಣ ಎಷ್ಟು ಎಂದು ಬರೆದಿಲ್ಲ ಎಂದರೆ ಸರಿ. ಮನೆ ನಂಬರ 1/ಎ ಇದು ಸರ್ವೇ ನಂಬರ 22/2 ರಲ್ಲಿ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

5. ನಿಶಾನೆ ಡಿ 72 ನ್ನು ಶ್ರೀ ಬಿ ಕೆ ಪಾಟೀಲ ಎಂಬ ದಸ್ತುರ ರವರು ಬರೆದಿರುತ್ತಾರೆ. ಸದರಿ ನಿಶಾನೆ ಡಿ 72 ಬಾಂಡ್ ನ್ನು ಶ್ರೀ ಕಲ್ಲಪ್ಪ ರವರು ತಂದಿರುತ್ತಾರೆ ಹಾಗೂ ಶನಿವಾರ ಕೂಟದಲ್ಲಿ ಬರೆದಿರುತ್ತಾರೆ. ಸದರಿ ನಿಶಾನೆ ಡಿ 72 ಬಾಂಡ್ ಮೇಲೆ ಕಲ್ಲಪ್ಪ ಪಾಟೀಲ ರವರು 2 ಬಾರಿ ಸಹಿ ಮಾಡಿರುತ್ತಾರೆ. ಸದರಿ ಶ್ರೀ ಬಿ ಕೆ ಪಾಟೀಲ ರವರು ಮೃತರಾಗಿರುವುದರಿಂದ ಅವರ ಸಾಕ್ಷಿಯನ್ನು ಮಾಡಿಸಲು ಆಗುವುದಿಲ್ಲ. ಸದರಿ ನಿಶಾನೆ ಡಿ 72 ಆಗುವ ಕಾಲಕ್ಕೆ ವೈಜು ಕಲ್ಲಪ್ಪ ಪಾಟೀಲ, ನಾರಾಯಣ ಪಾಟೀಲ, ಬಾಬುರಾವ್ ಪಾಟೀಲ ಹಾಗೂ ಸಹದೇವ ಪಾಟೀಲ ರವರುಗಳು ಸಾಕ್ಷಿದಾರರು ಆಗಿ ಇದ್ದರು. ಸದರಿ ಸಾಕ್ಷಿದಾರರು ಕಲ್ಲಪ್ಪ ಪಾಟೀಲ ರವರ ಜೊತೆ

ಬಂದಿದ್ದರು. ಸದರಿಯವರು ನಾನು ಶನಿವಾರ ಕೂಟಕ್ಕೆ ಬಂದ ನಂತರ ಬಂದರು. ನಾನು ಸಾಕ್ಷಿದಾರರು ಬರುವ 5-10 ನಿಮಿಷ ಮೊದಲು ಬಂದಿದ್ದೇನು. ಸಾಕ್ಷಿದಾರರು ಎಲ್ಲರೂ ಕಲ್ಲಪ್ಪ ಪಾಟೀಲ ರವರ ಕಡೆಗಿನವರಾಗಿದ್ದರು. ನಾನು ಶನಿವಾರ ಕೂಟಕ್ಕೆ ಬಂದಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ನಾನು ಖರೀದಿ ಕರಾರು ಪತ್ರ ದಿನ ನೀಡಿದ ಹಣದಲ್ಲಿ ಕೆಲವು ಹಣ ನನ್ನ ತಂದೆ, ನನ್ನ ತಾಯಿ ಹಾಗೂ ನಾನು ದುಡಿದು ಕೂಡಿಟ್ಟ ಹಣವಾಗಿತ್ತು. ಸದರಿ ಹಣ ನನ್ನ ಬಳಿ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ಕಾಗದ ಪತ್ರ ಇರುವುದಿಲ್ಲ. ನಾನು ಪೆಟಿಂಗ್ ಕೆಲಸ ಮಾಡುತ್ತಿದುದ್ದರಿಂದ ನನಗೆ ಸಂಪಾದನೆ ಇತ್ತು. ನಿಶಾನೆ ಡಿ 72 ರಲ್ಲಿ ಕಲ್ಲಪ್ಪ ಮಹಾದೇವ ಪಾಟೀಲ ರವರ ಸಹಿ ಇಲ್ಲದೇ ಇದ್ದರೂ ಸಹ ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ 72 ರನ್ವಯ ಖರೀದಿ ಪತ್ರ ಮಾಡಿಕೊಡಬೇಕು ಎಂದು ನ್ಯಾಯಾಲಯದಲ್ಲಿ ಇಲ್ಲಿಯವರೆಗೆ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಖರೀದಿ ಕರಾರು ಪತ್ರದ ಅನ್ವಯ ಖರೀದಿ ಪತ್ರ ಮಾಡಿಕೊಡಬೇಕು ಎಂದು ಇಲ್ಲಿಯವರೆಗೆ ಲಿಖಿತ ನೋಟಿಸ ನೀಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ 72 ಸೃಷ್ಟಿತ ದಾಖಲೆಯಾಗಿರುವುದರಿಂದ ನಾನು ನ್ಯಾಯಾಲಯದಲ್ಲಿ ಸದರಿ ಖರೀದಿ ಕರಾರು ಪತ್ರದ ಅನ್ವಯ ಖರೀದಿ ಪತ್ರ ಮಾಡಿಕೊಡಿ ಎಂದು ಮಾಂಗಣಿ ಕೇಳಿ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ನಿಶಾನೆ ಡಿ 72 ರನ್ವಯ ಖರೀದಿ ಪತ್ರ ಮಾಡಿಕೊಡಿ ಎಂದು ದಾವೆ ಸಲ್ಲಿಸಲು ಯಾ ಖರೀದಿ ಪತ್ರ ಮಾಡಿಕೊಡಿ ಎಂದು ನೋಟಿಸನ್ನು ನೀಡಲು ಯಾವುದೇ ಅಡಚನೆ ಇರಲಿಲ್ಲ ಎಂದರೆ ಸರಿ.

6. ಗ್ರಾಮಪಂಚಾಯತ ಸರಹದ್ದಿನಲ್ಲಿ ಮನೆ ಕಟ್ಟಲು ಅದರ ಪರವಾನಿಗೆ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಗ್ರಾಮಪಂಚಾಯತಿಯಿಂದ ಯಾವುದೇ ಪರವಾಣಿಗೆ ಪಡೆದುಕೊಂಡಿರುವುದಿಲ್ಲ. ಸರ್ವೇ ನಂಬರ 22/2 ಇದು ಕೃಷಿ ಜಮೀನು

ಆಗಿರುವುದರಿಂದ ಅದಕ್ಕೆ ಸರ್ವೇ ನಕಾಶೆ ಇರುತ್ತದೆ ಎಂದರೆ ಸರಿ. ಸದರಿ ಸರ್ವೇ ನಕಾಶೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರಕ್ಕೆ ಅನುಕೂಲವಾಗಲೀ ಎಂದು ಕರನಕ್ಷೆಯನ್ನು ತಯಾರುಪಡಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ಸರ್ವೇ ನಂಬರ 22/2 ರಲ್ಲಿ ನನ್ನ ಮನೆ ಬರುತ್ತದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ಸರ್ವೇ ಮಾಡಿಸಲು ನನಗೆ ತೊಂದರೆ ಇಲ್ಲ. ಪ್ರತಿವಾದ ಪತ್ರ ಕರನಕ್ಷೆಯನ್ನು ಸರ್ವೇ ನಕಾಶೆ ಪ್ರಕಾರ ತಯಾರಿಸಿಲ್ಲ ಎಂದರೆ ಗ್ರಾಮಪಂಚಾಯತಿಯವರು ನೀಡಿರುವ ಮಾಹಿತಿಯ ಪ್ರಕಾರ ತಯಾರಿಸಲಾಗಿರುತ್ತದೆ. ಸದರಿ ಈ ರೀತಿ ಮಾಹಿತಿಯನ್ನು ಪಿ ಡಿ ಓ ರವರು ನೀಡಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**